# ಕರ್ನಾಟಕ ಸರ್ಕಾರ

## ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆ

ಇಡಿ 321 ಪಿಬಿಎಸ್. 2018 ದಿನಾಂಕ 26.07.2018

**ಟಿಪ್ಪಣಿ**

ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಇರುವ (6–8) ಪದವೀಧರ ಸಹಶಿಕ್ಷಕರ 10000 ಹುದ್ದೆಗಳನ್ನು ಭರ್ತಿ ಮಾಡಲು ಜಿಲ್ಲಾವಾರು ಅಧಿಸೂಚನೆ ದಿನಾಂಕ 24.07.2017ರಂದು ಹೊರಡಿಸಲಾಗಿದ್ದು. ಈ ನೇಮಕಾತಿ ಅಧಿಸೂಚನೆ ಅನ್ವಯ ಸುಮಾರು 2,500 ಅಭ್ಯರ್ಥಿಗಳು ಮಾತ್ರ ಅರ್ಹತೆ ಹೊಂದಿದ್ದು ಎಂದು ದಿನಾಂಕ 02.07.2018ರಂದು ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ವರದಿ ನೀಡಿರುತ್ತಾರೆ. ಹೆಚ್ಚು ಅಭ್ಯರ್ಥಿಗಳಿಗೆ ಆಯ್ಕೆ ಅವಕಾಶ ಕೊಡಲು ಸುಮಾರು ಅಭ್ಯರ್ಥಿಗಳು ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಶಿಕ್ಷಣ ಸಚಿವರಿಗೆ ಮನವಿ ಸಲ್ಲಿಸಿ ಅರ್ಹತಾ ಮಾನದಂಡಗಳನ್ನು ಸಡಿಲಗೊಳಿಸಲು ಕೋರಿದ್ದರು. ಅದರಂತೆ ಕ್ರಮ ವಹಿಸಲು ಮಾನ್ಯ ಮುಖ್ಯಮಂತ್ರಿಯವರು ಸೂಚಿಸಿದಾಗ ಕಾನೂನು ಇಲಾಖೆ ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆಯ ಅಭಿಪ್ರಾಯ ಪಡೆಯಲಾಯಿತು. ಅರ್ಹತಾ ಗುಣಮಟ್ಟವನ್ನು ತುಂಬಾ ಸಡಿಲಗೊಳಿಸದೆ ಹೆಚ್ಚು ಹುದ್ದೆಗಳನ್ನು ಭರ್ತಿ ಮಾಡಲು ಎಷ್ಟು ಕನಿಷ್ಠ ಅಂಕ ಮಾಡಬಹುದು ಎಂದು ಸರ್ಕಾರ ನಿರ್ಧರಿಸಬಹುದು ಎಂಬ ಅಭಿಪ್ರಾಯದ ಪ್ರಕಾರ ಹಿಂದಿನ ಅಧಿಸೂಚನೆ ಸಂಖ್ಯೆ ಇಡಿ 321 ಪಿಬಿಎಸ್ 2018 ದಿನಾಂಕ 17.07.2018ರಂದು ಮಾರ್ಪಾಡು ಮಾಡಲಾಯಿತು. ಅದರಂತೆ, ಎನ್.ಐ.ಸಿ ತಂತ್ರಾಂಶದ ಪ್ರಕಾರ ಪೇಪರ್ 2 ಮತ್ತು 3ರಲ್ಲಿ ಶೇಕಡ 1 ರಿಂದ 5ರಷ್ಟು ಕಡಿಮೆ ಮಾಡಿದಲ್ಲಿ ಎಷ್ಟು ಹೆಚ್ಚುವರಿ ಹುದ್ದೆಗಳನ್ನು ಜಿಲ್ಲಾವಾರು ಹಾಗೂ ವಿಷಯವಾರು ತುಂಬ ಬಹುದಾಗಿದೆ ಎಂಬ ಬಗ್ಗೆ ವಿವರ ಆಯುಕ್ತರಿಂದ ನಿರೀಕ್ಷಿಸಲಾಗಿದೆ.

ಆದುದರಿಂದ, ಎನ್.ಐ.ಸಿ ತಂತ್ರಾಂಶದ ಮೂಲಕ ಈಗಾಗಲೇ ಪೇಪರ್ 2ರಲ್ಲಿ ಶೇಕಡ 50 ಮತ್ತು ಪೇಪರ್ 3ರಲ್ಲಿ ಶೇಕಡ 60 ಪಡೆದ 1:2 ಪಟ್ಟಿ ಅಲ್ಲದೆ ಶೇಕಡ 1 ರಿಂದ 5ರವರೆಗೂ ಪೇಪರ್ 2 ಮತ್ತು 3 ದಲ್ಲಿ ಅರ್ಹತೆ ಮಾನದಂಡವನ್ನು ಸಡಿಲಿಸಿ ಜಿಲ್ಲಾವಾರು ಹಾಗೂ ವಿಷಯವಾರು ಅರ್ಹರಿರುವ ಅಭ್ಯರ್ಥಿಗಳ ಅಂಕಿಅಂಶಗಳನ್ನು ನೀಡಲು ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ ಹಾಗೂ ಎನ್.ಐ.ಸಿಗೆ ಸೂಚಿಸಲಾಗಿದೆ. ದಿನಾಂಕ 17.07.2018 ರಂದು ಹೊರಡಿಸಿದ ಅಧಿಸೂಚನೆ ಎಲ್ಲಾ ಅಭ್ಯರ್ಥಿಗಳಿಗೆ ಅನ್ವಯವಾಗುವುದಿಲ್ಲ ಎಂದು ಸ್ಪಷ್ಟೀಕರಿಸಲಾಗಿದೆ. ಸರ್ಕಾರ ನಿಗಧಿ ಪಡಿಸಿದ ಕನಿಷ್ಠ ಶೇಕಡವಾರು ಅಂಕಗಳ ಅರ್ಹತೆ ಮಾನದಂಡವನ್ನು ಆಯುಕ್ತರ ವರದಿ ಬಂದ ನಂತರ ನಿರ್ಧರಿಸಲಾಗುವುದು.

(ಜೆ.ಆರ್. ಅನ್ನಪೂರ್ಣ)
ಸರ್ಕಾರದ ಉಪಕಾರ್ಯದರ್ಶಿ(ಸೇವೆಗಳು)
ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆ

ಆಯುಕ್ತರು,
ಸಾರ್ವಜನಿಕ ಶಿಕ್ಷಣ ಇಲಾಖೆ,
ಬೆಂಗಳೂರು.